**ಆರ್.ಡಬ್ಲ್ಯೂ-5**

**ದಿನಾಂಕ:15-04-2016 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

ಈ ದಾವಾಕ್ಕೆ ಸಂಬಂಧಪಟ್ಟಂತೆ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ನಿಜವಿರುತ್ತವೆ. ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕೆಂದು ಕೋರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಪಿಎನ್ ವಕೀಲರಿಂದ :-**

ದಿ:21-12-1999 ರ ದಾನಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-28 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರವಾಗಿ ಶ್ರೀ ಎನ್.ಎಸ್.ಎಸ್.ವಕೀಲರಿಂದ:**

ನಾನು ಈ ಕೇಸಿಗೆ ಅನೇಕ ಬಾರಿ ನ್ಯಾಯಾಲಯದ ಮುಂದೆ ಹಾಜರಾಗಿದ್ದೇನೆ. ಅರ್ಜಿದಾರರು ಈ ಪ್ರಕರಣವನ್ನು ಯಾವ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆಂದು ನನಗೆ ಗೊತ್ತು. ಅರ್ಜಿದಾರರು ಅರ್ಜಿಯಲ್ಲಿ ನನ್ನ ಆಸ್ತಿಯನ್ನು ಹೊರತುಪಡಿಸಿ ಇತರರಿಗೆ ಸೇರಿದ ಆಸ್ತಿಗೆ ನಾನೇ ಮಾಲೀಕನೆಂದು ಘೋಷಣೆ ಕೋರಿರುತ್ತಾರೆ. ಅರ್ಜಿ ಸಲ್ಲಿಸಿರುತ್ತಾರೆ. ಎಫ್.ಡಿ.ಪಿ. ಕೇಸನ್ನು ನಾನೇ ದಾಖಲು ಮಾಡಿದ್ದೆ. ಮೂಲ ದಾವೆ ಡಿಕ್ರಿಯಾದ ನಂತರ ನನ್ನ ತಾಯಿ ನನ್ನ ಹೆಸರಿಗೆ ಒಂದು ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ. ಅರ್ಜಿದಾರರಿಗೂ ಸಹ ನನ್ನ ತಾಯಿ ಎರಡು ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ. ಮಂಜುನಾಥರವರಿಗೆ ಬರೆದುಕೊಟ್ಟ ದಾನಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ನನ್ನ ತಂದೆ ಮೃತಪಟ್ಟ ನಂತರ ಆಸ್ತಿ ಸಂಬಂಧ ನಮ್ಮ ಕುಟುಂಬದಲ್ಲಿ ಸಣ್ಣ ಪುಟ್ಟ ಮಾತುಕತೆ ಉಂಟಾಗಿತ್ತು. 2 ನೇ ಎದುರುದಾರರು ಸುಮಾರು 45 ಲಕ್ಷ ಸಾಲ ಮಾಡಿದ್ದು ಅದನ್ನು ತೀರುವಳಿ ಮಾಡಲು ನನ್ನ ತಾಯಿ ಮತ್ತು ಕುಟುಂಬದ ಸದಸ್ಯರ ನಡುವೆ ಮಾತುಕತೆ ನಡೆದಿರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು 45 ಲಕ್ಷ ರೂ. ಸಾಲದ ಬಗ್ಗೆ ಗೊತ್ತಿಲ್ಲ. 10-12 ಲಕ್ಷ ರೂ. ಸಾಲ ಇರಬಹುದು. ಆಗ ಅರ್ಜಿದಾರರು ಸುಮಾರು 7-8 ಲಕ್ಷ ಬೆಲೆ ಬಾಳುವ ಆಸ್ತಿಯನ್ನು ಮಾರಾಟ ಮಾಡಿ ಸಾಲ ತೀರುವಳಿ ಮಾಡಿರುತ್ತಾರೆ. ನನ್ನ ಇತರೆ ಸಹೋದರ

ಸಹೋದರಿಯರು ನನ್ನ ತಾಯಿಗೆ ಆಸ್ತಿಯನ್ನು ಕೇಳಿರುವುದಿಲ್ಲ ಹಾಗಾಗಿ ಅವರಿಗೆ ದಾನಪತ್ರ ಬರೆದುಕೊಟ್ಟಿರುವುದಿಲ್ಲ. ದಾನಪತ್ರಕ್ಕೆ ಕುಟುಂಬದ ಸದಸ್ಯರು ಸಹಿಗಳನ್ನು ಮಾಡಿರುತ್ತಾರೆಂದರೆ ಸರಿ. ಅರ್ಜಿದಾರರ ಹೆಸರಿಗೆ ಬರೆದುಕೊಟ್ಟ ಮನೆಯ ದಾನಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಜಮೀನು ದಾನಪತ್ರಕ್ಕೆ ಸಹಿ ಮಾಡಿರುತ್ತೇನೆ. ನನಗೆ ದಾನಪತ್ರದಲ್ಲಿ ನನ್ನ ಹಿಸ್ಸೆಗಿಂತ ಹೆಚ್ಚು ಆಸ್ತಿ ಬಂದಿರುತ್ತದೆಂದರೆ ಸರಿಯಲ್ಲ. ನನಗೆ ಹಿಸ್ಸೆ ಲೆಕ್ಕಾಚಾರ ಮಾಡಿದರೆ ಕೇವಲ 18 ಗುಂಟೆ ಮಾತ್ರ ಬರುತ್ತದೆಂದರೆ ಸರಿಯಲ್ಲ. ಅರ್ಜಿದಾರರ ಹೆಸರಿಗೆ ಬರೆದುಕೊಟ್ಟ ದಾನಪತ್ರ ಸರಿ ಇರುವುದಿಲ್ಲ ಎಂದು ಮಾತನಾಡಿದೆವು ಆದರೆ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುವುದಿಲ್ಲ. ನನ್ನ ಸಹೋದರಿಯರು ನ್ಯಾಯಾಲಕ್ಕೆ ಬಂದು ಸಾಕ್ಷಿ ನುಡಿದ ವಿಚಾರ ನನಗೆ ಗೊತ್ತಿಲ್ಲ. ಭಾಗಾಂಶದ ಕೇಸನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರರ ಹೆಸರಿಗೆ ನನ್ನ ತಾಯಿ ಬರೆದುಕೊಟ್ಟ ದಾನಪತ್ರ ಸರಿ ಇರುತ್ತದೆಂದರೆ ಸರಿಯಲ್ಲ. 2ನೇ ಎದುರುದಾರರ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಅರ್ಜಿದಾರರ ಸ್ವಾಧೀನಕ್ಕೆ 2 ನೇ ಅರ್ಜಿದಾರರು ತಕರಾರು ಮಾಡಿದ ಕಾರಣ ಅರ್ಜಿದಾರರು ಈ ಅರ್ಜಿ ತಂದಿರುತ್ತಾರೆಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**(ಇ.ಚಂದ್ರಕಲಾ)**
ಹಿರಿಯ ಸಿವಿಲ್ ಜಡ್ಜ್ ಮತ್ತು ಎಂಎಸಿಟಿ
ಅರಸೀಕೆರೆ, ದಿಃ15-04-2016